# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಹೊಂಬೇಗೌಡನಗರ ಉಪವಿಭಾಗ,
ಬೃ.ಬೆಂ.ಮ.ಪಾಲಿಕೆ 7ನೇ ಅಡ್ಡರಸ್ತೆ, 7ನೇ ಮುಖ್ಯರಸ್ತೆ, ಜಯನಗರ 2ನೇ ಬ್ಲಾಕ್ ಬೆಂಗಳೂರು

ಸಂಖ್ಯೆ:ಸ.ಇಂ/ವಾ-153/ವಾರ್ಡ್ ಸಭೆ/2020-21 ದಿನಾಂಕ:08/03/2021

## ವಾರ್ಡ್ -153ರ ವಾರ್ಡ್ ಸಭೆಯ ನಡವಳಿ

ದಿನಾಂಕ:08/03/2021 ರಂದು ಹೊಂಬೇಗೌಡನಗರ ಉಪವಿಭಾಗ ವಾರ್ಡ್-153ರ ವಾರ್ಡ್ ಕಛೇರಿಯಲ್ಲಿ ಶ್ರೀಮತಿ. ವರಲಕ್ಷ್ಮಿ ಸಹಾಯಕ ಆಯುಕ್ತರು, (ಆಡಳಿತ) ದಕ್ಷಿಣ ವಲಯ ವಾರ್ಡ್ 153ರ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿ.

| ಕ್ರಮ ಸಂಖ್ಯೆ | ಅಧಿಕಾರಿಯವರ ಹೆಸರು | ಪದನಾಮ/ಇಲಾಖೆ | ಹಾಜರಾತಿ |
|---|---|---|---|
| 1 | ಶ್ರೀ. ವರಲಕ್ಷ್ಮಮ್ಮ ಎಲ್. | ಸಹಾಯಕ ಆಯುಕ್ತರು (ಆಡಳಿತ) ದಕ್ಷಿಣ ವಲಯ | ಹಾಜರಿದ್ದರು |
| 2 | ಶ್ರೀ. ನರಸಿಂಹಯ್ಯ ಎನ್. | ಕಿರಿಯ ಅಭಿಯಂತರರು ವಾರ್ಡ್-153-ಜಯನಗರ | ಹಾಜರಿದ್ದರು |
| 3 | ಶ್ರೀ. ರವೀಂದ್ರ ಹಿಜೇರಿ | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್-153 | ಹಾಜರಿದ್ದರು |
| 4 | ಶ್ರೀ. ವಿದ್ಯಾಧರ್ | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್-153 | ಹಾಜರಿದ್ದರು |
| 5 | ಶ್ರೀ. ಮೂರ್ತಿ | ಸಹಾಯಕ ಅಭಿಯಂತರರು ಬೆಸ್ಕಾಂ ಇಲಾಖೆ | ಹಾಜರಿದ್ದರು |

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಪದನಾಮ | ಹಾಜರಾತಿ |
|---|---|---|---|
| 1 | ಶ್ರೀ. ಬಹದ್ದೂರ್ | ಸದಸ್ಯರು | ಹಾಜರಿದ್ದರು |
| 2 | ಶ್ರೀ. ಲಕ್ಷ್ಮೀಶ | ಸದಸ್ಯರು | ಹಾಜರಿದ್ದರು |
| 3 | ಡಾ॥ ಪ್ರಕಾಶ್ | ಸದಸ್ಯರು | ಹಾಜರಿದ್ದರು |
| 4 | ಶ್ರೀ. ಭೀಮಪ್ಪ | ಸದಸ್ಯರು | ಹಾಜರಿದ್ದರು |

ಮ.ತಿ.ನೋ..



Scanned with CamScanner

| ಕ್ರಮ ಸಂಖ್ಯೆ | ಸ್ಥಳೀಯರ ಹೆಸರು | ವಿವರ | ಹಾಜರಾತಿ |
|---|---|---|---|
| 1 | ಶ್ರೀ. ಪ್ರದೀಪ್ ಮೆಡೋನ | ಸ್ಥಳೀಯರು | ಹಾಜರಿದ್ದರು |
| 2 | ಶ್ರೀ. ಗೋವಿಂದ | ಸ್ಥಳಿಯರು | ಹಾಜರಿದ್ದರು |
| 3 | ಶ್ರೀ. ಶ್ರೀನಿವಾಸ್ | ಸ್ಥಳಿಯರು | ಹಾಜರಿದ್ದರು |

ಮಾನ್ಯ ಅಧ್ಯಕ್ಷರ ಸ್ವಾಗತದೊಂದಿಗೆ ಅಧಿಕಾರಿಗಳು/ಹಾಜರಿದ್ದವರ ಪರಸ್ಪರ ಪರಿಚಯದೊಂದಿಗೆ ಸಭೆಯನ್ನು ನಿಗಧಿತ ಸಮಯಕ್ಕೆ ಪ್ರಾರಂಭಿಸಲಾಯಿತು. ಸಭೆಯಲ್ಲಿ ಹಾಜರಿದ್ದ ಶ್ರೀಮತಿ. ವರಲಕ್ಷ್ಮಮ್ಮ ಎಲ್. ಸಹಾಯಕ ಆಯುಕ್ತರು (ಆಡಳಿತ) ರವರು ಹಿಂದಿನ ಸಭೆಯಲ್ಲಿ ನಡೆದ ವಿಷಯಗಳ ಬಗ್ಗೆ ಮತ್ತೊಮ್ಮೆ ಚರ್ಚಿಸಿದರು ವಿವರಗಳು ಈ ಕೆಳಕಂಡಂತಿವೆ.

1. **ವಾರ್ಡಿನಲ್ಲಿ ಘನತ್ಯಾಜ್ಯ ನಿರ್ವಹಣೆಯ ಬಗ್ಗೆ:-**

- ಶ್ರೀಮತಿ. ವರಲಕ್ಷ್ಮಮ್ಮ, ಸಹಾಯಕ ಆಯುಕ್ತರು (ಆಡಳಿತ) ರವರು ಘನತ್ಯಾಜ್ಯ ನಿರ್ವಹಣೆಯ ಬಗ್ಗೆ ಮಾತನಾಡಿ, ವಾರ್ಡ್ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಹೋಟೆಲ್ ಉದ್ದಿಮೆ ನಡೆಸುತ್ತಿರುವವರ ಬಗ್ಗೆ ತೆಗೆದುಕೊಂಡಿರು ಕ್ರಮಗಳ ಬಗ್ಗೆ ಮಾಹಿತಿಯನ್ನು ನೀಡುವಂತೆ ಕೋರಿದರು ಈ ಸಂಬಂಧ ಹಿರಿಯ ಆರೋಗ್ಯ ಪರಿವೀಕ್ಷಕರು ಉತ್ತರಿಸಿ ಸಂಬಂಧಪಟ್ಟ ಹೋಟೆಲ್ ಉದ್ದಿಮೆದಾರರಿಗೆ ನೋಟಿಸ್ ಜಾರಿ ಮಾಡಿರುವುದಾಗಿ ಹಾಗೂ ಮಾಹಿತಿಗಳನ್ನು ಮುಂದಿನ ಸಭೆಯಲ್ಲಿ ಸಲ್ಲಿಸುವುದಾಗಿ ತಿಳಿಸಿದರು.

2. **ಬೆಸ್ಕಾಂ ವಿಭಾಗ :-**

- ಸಭೆಯಲ್ಲಿ ಹಾಜರಾಗಿದ್ದ ಸ್ಥಳೀಯರಾದ ಶ್ರೀ. ಪ್ರದೀಪ್ ಮೆಡೋನ ರವರು ಮಾತನಾಡಿ ಟೆಕನ್ ಕೌಂಟಿ ಮತ್ತು ಎಸ್.ಆರ್.ಕೆ ಗಾರ್ಡನ್ ಸುತ್ತಮುತ್ತ ರಸ್ತೆಗಳನ್ನು ಬೀದಿ ದೀಪಗಳು ಇಲ್ಲದೇ ತೊಂದರೆಯಾಗಿರುವುದಾಗಿ ಮತ್ತೊಮ್ಮೆ ತಿಳಿಸಿದರು ಈ ವಿಷಯವಾಗಿ ಬೆಸ್ಕಾಂ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾದ ಶ್ರೀ. ಮೂರ್ತಿ ರವರು ಉತ್ತರಿಸಿ ಈ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವುದಾಗಿ ಸಭೆಗೆ ತಿಳಿಸಿದರು.

3. **ಕಾಮಗಾರಿ ವಿಭಾಗದ ಬಗ್ಗೆ:-**

- ಸಭೆಯಲ್ಲಿ ಹಾಜರಾಗಿದ್ದ ಸ್ಥಳೀಯರಾದ ಶ್ರೀ. ಪ್ರದೀಪ್ ಮೆಡೋನ ರವರು ಮಾತನಾಡಿ ಟೆಕನ್‌ಕೌಂಟಿ ಮುಖ್ಯರಸ್ತೆಯಲ್ಲಿ ಡೆಬ್ರಿಸ್ ತೆರವುಗೊಳಿಸುವಂತೆ ಕೋರಿದರು. ಈ ವಿಷಯವಾಗಿ ಸಭೆಯಲ್ಲಿ ಹಾಜರಿದ್ದ ವಾರ್ಡಿನ ಅಭಿಯಂತರರು ಕ್ರಮ ಜರುಗಿಸುವುದಾಗಿ ಸಭೆಗೆ ತಿಳಿಸಿದರು.
- ಸಭೆಯಲ್ಲಿ ಹಾಜರಾಗಿದ್ದ ಸ್ಥಳೀಯರಾದ ಶ್ರೀ. ಪ್ರದೀಪ್ ಮೆಡೋನ ರವರು ಮಾತನಾಡಿ ವಾಡ್ ವ್ಯಾಪ್ತಿಯಲ್ಲಿ ರಾಜಕೀಯ ನಾಯಕರ ಛಾಯಾಚಿತ್ರಗಳನ್ನು ತೆರವುಗೊಳಿಸುವಂತೆ ಕೋರಿದರು. ಈ ವಿಷಯವಾಗಿ ವಾರ್ಡಿನ ಅಭಿಯಂತರರು ಉತ್ತರಿಸಿ ಪರಿಶೀಲಿಸಿ ಈ ಬಗ್ಗೆ ಕ್ರಮ ಜರುಗಿಸುವುದಾಗಿ ತಿಳಿಸಿದರು.

ಮು.ತಿ.ನೋ..



Scanned with CamScanner

- ಸಭೆಯಲ್ಲಿ ಹಾಜರಾಗಿದ್ದ ಸ್ಥಳೀಯರಾದ ಶ್ರೀ. ಪ್ರದೀಪ್ ಮೆಡೋನ ರವರು ಮಾತನಾಡಿ ಬಿ.ಹೆಚ್.ಇ.ಎಲ್ ಲೇಔಟ್‌ನ ಉದ್ಯಾನವನದ ಕಾಮಗಾರಿಯ ವಿವರ ಕೋರಿದರು. ಈ ವಿಷಯವಾಗಿ ವಾರ್ಡಿನ ಅಭಿಯಂತರರು ಉತ್ತರಿಸಿ ಸಂಬಂಧಪಟ್ಟ ಇಲಾಖೆಯಿಂದ ವಿವರಗಳನ್ನು ಪಡೆದು ನೀಡಲಾಗುವುದೆಂದು ತಿಳಿಸಿದರು.

- ಸಭೆಯಲ್ಲಿ ಹಾಜರಾಗಿದ್ದ ಸದಸ್ಯರಾದ ಬಹದ್ದೂರು ರವರು ಮಾತನಾಡಿ ಗುಲ್ಬರ್ಗ ಕಾಲೋನಿಯಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗೆ ಸಂಬಂಧಪಟ್ಟಂತೆ ಕೆಲವು ವಿವರಗಳನ್ನು ಕೋರಿದರು. ಈ ವಿಷಯವಾಗಿ ವಾರ್ಡಿನ ಅಭಿಯಂತರರು ಉತ್ತರಿಸಿ ವಿವರಗಳನ್ನು ನೀಡಲಾಗುವುದೆಂದು ತಿಳಿಸಿದರು.

- ಸಭೆಯಲ್ಲಿ ಹಾಜರಾಗಿದ್ದ ಸ್ಥಳೀಯರಾದ ಶ್ರೀ. ಪ್ರದೀಪ್ ಮೆಡೋನ ರವರು ಮಾತನಾಡಿ ಬಿ.ಹೆಚ್.ಇ.ಎಲ್ ಲೇಔಟ್‌ನಲ್ಲಿ ಮಳೆನೀರು ಇಂಗು ಗುಂಡಿಗಳನ್ನು ಅಳವಡಿಸಲು ಮತ್ತೊಮ್ಮೆ ಕೋರಿರುತ್ತಾರೆ. ಈ ವಿಷಯವಾಗಿ ವಾರ್ಡಿನ ಅಭಿಯಂತರರು ಉತ್ತರಿಸಿ ಇಂಗುಗುಂಡಿ ಅಳವಡಿಸಲು ಸ್ಥಳವನ್ನು ತೋರಿಸುವಂತೆ ಸ್ಥಳೀಕರಿಗೆ ಸಭೆಯಲ್ಲಿ ತಿಳಿಸಿದರು.

- ಸಭೆಯಲ್ಲಿ ಹಾಜರಾಗಿದ್ದ ಸ್ಥಳೀಯರಾದ ಶ್ರೀ. ಶ್ರೀನಿವಾಸ್ ರವರು ಮಾತನಾಡಿ 9ನೇ ಮುಖ್ಯರಸ್ತೆಯಲ್ಲಿರುವ ವಾರ್ಡ್ ಕಛೇರಿ ಎದುರು ಇರುವ ಕಟ್ಟಡಕ್ಕೆ ಸಂಬಂಧಪಟ್ಟಂತೆ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ಮತ್ತೊಮ್ಮೆ ಕೋರಿದರು. ಈ ವಿಷಯವಾಗಿ ವಾರ್ಡಿನ ಅಭಿಯಂತರರು ಉತ್ತರಿಸಿ ಸ್ಪಷ್ಟವಾದ ಸ್ವತ್ತಿನ ಸಂಖ್ಯೆ ತಿಳಿಸಿರುವುದಿಲ್ಲ ಎಂದು ಸಭೆಗೆ ತಿಳಿಸಿದರು. ನಂತರ ಶ್ರೀ. ಶ್ರೀನಿವಾಸ್ ರವರು ಸ್ಪಷ್ಟ ವಿಳಾಸದ ಅರ್ಜಿ ನೀಡುವುದಾಗಿ ತಿಳಿಸಿದರು.

- ಸಭೆಯಲ್ಲಿ ಹಾಜರಾಗಿದ್ದ ಮಾನ್ಯ ಅಧ್ಯಕ್ಷರು ಮಾತನಾಡಿ ಆರ್ಮುಗಂ ವೃತ್ತದಲ್ಲಿ ಚರಂಡಿಯ ಮೇಲ್ಭಾಗದಲ್ಲಿ ಚಪ್ಪಡಿ ಕಲ್ಲು ಇಲ್ಲದಿರುವ ಬಗ್ಗೆ ಹಿಂದಿನ ಸಭೆಯಲ್ಲಿ ತಿಳಿಸಿದರು ಈ ವಿಷಯವಾಗಿ ವಾರ್ಡಿನ ಅಭಿಯಂತರರು ಉತ್ತರಿಸಿ ಚರಂಡಿ ಮೇಲ್ಭಾಗದಲ್ಲಿ ಚಪ್ಪಡಿ ಕಲ್ಲನ್ನು ಹಾಕಿ ಈ ಬಗ್ಗೆ ಕ್ರಮ ವಹಿಸಿರುವುದಾಗಿ ಸಭೆಗೆ ತಿಳಿಸಿದರು.

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಂಡು ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು.

ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| (ನರಸಿಂಹಯ್ಯ ಎಸ್.) | (ವರಲಕ್ಷ್ಮಮ್ಮ ಎಲ್) |
| ಕಾರ್ಯದರ್ಶಿ | ನೋಡಲ್ ಅಧಿಕಾರಿ |
| ವಾರ್ಡ್–153 ಜಯನಗರ | ವಾರ್ಡ್–153 ಜಯನಗರ |



Scanned with CamScanner